ಹಾಡ್ಯ ಬಿ. ಜಯಾನಂದ, ಮೈಸೂರು
*ಆಗ ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಈಗ?*



ಹೊಟ್ಟೆಗಾಗಿ, ಇಂಚು ಬಟ್ಟೆಗಾಗಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಮಾಜಿಮುಖ್ಯಮಂತ್ರಿಗಳನ್ನು ಕಸಕ್ಕೆ ಹೋಲಿಸಿದ್ದನ್ನು ಓದಿ ಕಸ ಬೇಸರಪಟ್ಟುಕೊಂಡಿದೆಯಂತೆ...?*
ನಿಜ. ಹಾಗೆ ಹೋಲಿಸಬಾರದಿತ್ತು. ಕೆಲವೊಮ್ಮೆ ಕಸಕ್ಕೂ ಸ್ವಾಭಿಮಾನವಿರುತ್ತದೆ!

ಎಂ. ನಾಗವೈಷ್ಣವಿ, ಹಾಸನ
*ಅಪ್ಪ ಹೋಂ ವರ್ಕ್ ಮಾಡು ಅಂತಾರೆ, ಅಮ್ಮ ಮನೆಕೆಲಸ ಮಾಡು ಅಂತಾಳೆ. ಯಾರ ಮಾತು ಕೇಳಲಿ ಅಂಕಲ್?*
ಅಮ್ಮನ ಕೈಲಿ ಹೋಂ ವರ್ಕ್ ಮಾಡಿಸು, ಅಪ್ಪನ ಕೈಲಿ ಮನೆಕೆಲಸ. ನೀನು ಕುಣಿದಾಡಿಕೊಂಡಿರು!

ಸವಿತ ಕೆ. ಕೊಡಸೋಗೆ
*ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತದ್ದು ರಾತ್ರಿ ಹನ್ನೆರಡಕ್ಕೆ. ಅಷ್ಟು ಹೊತ್ತಿನಲ್ಲಿ ಯಾರು ಎದ್ದಿದ್ದರು ಸ್ವಾಮಿ?*



'ಮರ್ಯಾದಸ್ಥರು ಮಲಗಿದ್ದರು...!' ಎನ್ನುತ್ತಾರೆ ಮಾಸ್ಟರ್ ಹಿರಣ್ಣಯ್ಯ.

ಆರ್. ಮಧುಸೂದನ್, ಹಾಸನ
*ಅಪ್ಪ, ಅಮ್ಮನ ಮೈ ಬಣ್ಣ ಅಮಾವಾಸ್ಯೆಯ ಕಪ್ಪು. ಆದರೆ ಮಗು ಬೆಳ್ಳಗಿದೆಯಲ್ಲಾ...?*
ಮಗು ಗರ್ಭದಲ್ಲಿದ್ದಾಗ ಅಮ್ಮ ಕೇಸರಿ ಬದಲು ಹಾಲಿಗೆ ಫೇರ್ & ಲವ್ಲಿ ಬೆರೆಸಿಕೊಂಡು ಕುಡಿಯುತ್ತಿದ್ದಳಂತೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಈಗಿನ ಕಾಲದಲ್ಲೂ ಪತಿಯನ್ನು ಗೌರವ ಭಾವದಿಂದ ಪೂಜಿಸುವ ಪತ್ನಿಯರಿದ್ದಾರಾ?*
ನಿಮ್ಮ ಮನೆಯಲ್ಲೂ ಇಲ್ಲವೇ? ಛೆ!

ಎಂ.ಜಿ.ಆರ್. ಶೇಖರ್, ದೊಡ್ಡಬಳ್ಳಾಪುರ
*ಸಿನಿಮಾ ತಾರೆಯರ ಹೊಕ್ಕಳಿಗೂ ಈಗ ಕಲಾತ್ಮಕ ಮೇಕಪ್ ಯೋಗ ಬಂದಿದೆ. ಮುಂದೆ...?*
ಕ್ಷಮಿಸಿ. ಈ ಪ್ರಶ್ನೆಗೆ ನೀಡಿದ ಉತ್ತರವನ್ನು ಸೆನ್ಸಾರ್ ಮಾಡಲಾಗಿದೆ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಚಿಂತೆಗೂ, ಚಿತೆಗೂ ಏನು ವ್ಯತ್ಯಾಸ?*
ಚಿಂತೆ ಇದ್ದಲ್ಲಿ ಪರಿಹಾರ, ಚಿತೆ ಇದ್ದಲ್ಲಿ ಪರಿವಾರ!

ಪಿ.ಜಿ.ರಾಘವೇಂದ್ರ, ಮೈಸೂರು
*ಮಳೆ-ಬಿಸಿಲಿನಿಂದ ರಕ್ಷಣೆ ನೀಡುವ ಛತ್ರಿಯನ್ನು ವಂಚಕರಿಗೆ ಹೋಲಿಸುವುದೇಕೆ?*
ಗಾಳಿ ಬೀಸಿದ ಕಡೆ ವಾಲಿಬಿಡುವುದರಿಂದ!

ವಿ. ಹಮೀದ್, ವಿಟ್ಲ
*ಹುಡುಗಿ ಹೈ ಹೀಲ್ಡ್ ಚಪ್ಪಲಿ ಹಾಕುತ್ತಾಳೆ, ಹುಡುಗ ಏಕೆ ಹಾಕುವುದಿಲ್ಲ?*
ಹೊಡೆಯುವುದಕ್ಕೆ ಗ್ರಿಪ್ ಸಿಗಬೇಕಾದುದು ಹುಡುಗಿಗೆ ಮಾತ್ರ ಅಲ್ಲವೇ!

ವಿದ್ಯಾನಾಗ್, ಬೆಂಗಳೂರು
*ಮೀನಿಗೂ, ಜಾಮೀನಿಗೂ ಏನು ವ್ಯತ್ಯಾಸ?*
ಗಾಳ ಕಚ್ಚುವುದು ಮೀನು, ಗಾಳ ಬಿಚ್ಚುವುದು ಜಾಮೀನು.

ಎಸ್. ಮೋಹನರಾಜು, ಶಿವಮೊಗ್ಗ
*ದಾರಿಯಿಲ್ಲದ ಊರು, ಮಕ್ಕಳಿಲ್ಲದ ಶಾಲೆ, ನಾರಿಯಿಲ್ಲದ ಮನೆ ಇವುಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ?*
ಇವೆಯಲ್ಲಾ! ಮಳೆಯಿಂದ ದಾರಿ ಮುಚ್ಚಿದ ಉತ್ತರಾಖಾಂಡ, ವಯಸ್ಕರ ಶಿಕ್ಷಣ ಶಾಲೆ, ಅಬ್ದುಲ್ ಕಲಾಮರ ಮನೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಇರೋದು ಒಂದೇ ಆದ್ರೂ ಪಂಚಪ್ರಾಣ ಅನ್ನುವುದೇಕೆ?*
ಬಂಧು, ಬಳಗ, ರೋಗ, ಚಿಂತೆ, ತೆರಿಗೆ ಎಂಬ ಪಂಚ ಅರಿಷ್ಟಗಳ ಬಾಯಿಗೆ ಹಂಚಿಹೋಗುವುದರಿಂದ!

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
*ಮಧುಚಂದ್ರಕ್ಕೂ, ಶೃಂಗಾರಕಾವ್ಯಕ್ಕೂ ಸಂಬಂಧವೇನು?*
ಸಂಸಾರವೆಂಬ ಕಾದಂಬರಿಗೆ ಶೃಂಗಾರಕಾವ್ಯ ಮುನ್ನುಡಿ, ಮದುವೆ ಪ್ರಸ್ತಾವನೆ, ಮಧುಚಂದ್ರ ಮೊದಲ ಅಧ್ಯಾಯ!

ಅಕ್ಷಯ ಜೈನ್, ದಾವಣಗೆರೆ
*ಪರಿಶುದ್ಧ ಪ್ರಶ್ನೆ ಕೇಳಲು ಯಾವ ಬ್ರಷ್, ಟೂತ್‌ಪೇಸ್ಟ್ ಉಪಯೋಗಿಸಬೇಕು ಸಾರ್?*
ಜ್ಞಾನದಾಹದ ಬ್ರಷ್, ಸಭ್ಯತೆಯ ಟೂತ್‌ಪೇಸ್ಟ್!

ಮಲ್ಲೇಶ ಕೆ. ಗುಂಡ್ಲುಪೇಟೆ
*ಸರ್ಕಾರಿ ಕೆಲಸ ದೇವರ ಕೆಲಸ; ಪ್ರೈವೇಟ್ ಕೆಲಸ...?*
hurry ದಾಸರ ಕೆಲಸ!

ಎಸ್.ಜಿ. ಕರನಂದಿ, ಹುನಗುಂದ
*ಪರಮ ಪವಿತ್ರವಾದ ನಮ್ಮ ದೇಶದಲ್ಲಿ ಸುಲಭವಾಗಿ ಸಿಗುವ ವಸ್ತು ಯಾವುದು?*




ಹಗರಣ!

ಕಂಡಕ್ಟರ್ ರಾಜು, ಗುಬ್ಬಿ
*ಕಾಯುವುದರಲ್ಲಿ ಶಬರಿಯಷ್ಟು ತಾಳ್ಮೆ ನಮಗೇಕಿಲ್ಲ?*
ತಾಳ್ಮೆಯನ್ನೇ bury ಮಾಡಿರುವುದರಿಂದ!

ಎಂ.ಎನ್. ಸೋಮಶೇಖರ್, ಮೈಸೂರು
*ಅರ್ಚಕನ ಜೀವನಕ್ಕೂ, ಅಕ್ಕಸಾಲಿಗನ ಜೀವನಕ್ಕೂ ಇರುವ ವ್ಯತ್ಯಾಸವೇನು?*
ಒಂದು ಚಿನ್ಮಯ, ಇನ್ನೊಂದು ಚಿನ್ನಮಯ!

ಎನ್.ವಿ. ಶ್ರೀನಿವಾಸ್, ಮೈಸೂರು
*ಪಗಡೆಯಾಟದಲ್ಲಿ ಪಾಂಡವರು ಒಂದು ವೇಳೆ ನಿಮ್ಮನ್ನು ಪಣಕ್ಕಿಟ್ಟಿದ್ದರೆ ಏನು ಮಾಡುತ್ತಿದ್ದಿರಿ?*
ಶಕುನಿಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದು ಕುಳಿತುಬಿಡುತ್ತಿದ್ದೆ!

■ ರಾಮ್